# ರಾಮೇಶ್ವರಂ—ಒಂದು ತೀರ್ಥ ಕ್ಷೇತ್ರ

ಸ್ವಾಮಿ ರಾಘವೇಶಾನಂದ


*"ದಕ್ಷಿಣದ ಕಾಶಿ" ಎಂದೇ ಪ್ರಸಿದ್ಧವಾಗಿರುವ ರಾಮೇಶ್ವರಂ ಯುಗ ಯುಗಗಳಿಂದ ಭಕ್ತಾದಿಗಳನ್ನು ತನ್ನತ್ತ ಆಕರ್ಷಿಸುತ್ತಿರುವ ತೀರ್ಥಕ್ಷೇತ್ರ. ಮಹಾಮಾತೆ ಶ್ರೀಶಾರದಾದೇವಿಯವರು, ಸ್ವಾಮಿ ವಿವೇಕಾನಂದರಾದಿಯಾಗಿ ಅನೇಕ ಮಹಾತ್ಮರು ಭೇಟಿ ನೀಡಿ ಆಧ್ಯಾತ್ಮಿಕವಾಗಿ ಶ್ರೀಮಂತವಾಗಿಸಿರುವ ಪಾವನ ಕ್ಷೇತ್ರ. ಅಲಸೂರಿನ ಸ್ವಾಮಿ ವಿವೇಕಾನಂದ ಆಶ್ರಮದ ಅಧ್ಯಕ್ಷರಾಗಿರುವ ಸ್ವಾಮಿ ರಾಘವೇಶಾನಂದರು ಸ್ಥಳದ ಐತಿಹ್ಯವನ್ನೂ, ಪೌರಾಣಿಕ ಹಿನ್ನೆಲೆಯನ್ನೂ ಇತ್ತೀಚಿನ ಸಂಶೋಧನೆಗಳಿಂದ ಬೆಳಕಿಗೆ ಬಂದಿರುವ ಕೆಲವು ಐತಿಹಾಸಿಕ ಸಂಗತಿಗಳನ್ನೂ ತಮ್ಮ ಸರಳವಾದ ಭಾಷೆಯಲ್ಲಿ ನಿರೂಪಿಸಿದ್ದಾರೆ.*

ರಾಮೇಶ್ವರದ ಹೆಸರನ್ನು ಯಾರು ಕೇಳಿಲ್ಲ? ಅದು ಕಾಶಿಯಷ್ಟೇ ಪ್ರಸಿದ್ಧವಾದ ಯಾತ್ರಾಸ್ಥಳ. ಅಷ್ಟೇ ಅಲ್ಲ, ಕಾಶಿಯ ವಿಶ್ವನಾಥನ ದರ್ಶನ ಮಾಡಿದವರು, ರಾಮೇಶ್ವರದಲ್ಲಿ ಶಿವನ ದರ್ಶನ ಮಾಡಿದಮೇಲೆಯೇ ಯಾತ್ರೆ ಪೂರ್ಣವಾಗುವುದೆಂದು ಪ್ರತೀತಿ. ಅದಕ್ಕಾಗೇ ಕಾಶಿಯಿಂದ ಗಂಗೆಯ ನೀರನ್ನು ತಂದು ರಾಮೇಶ್ವರನ ಶಿವನಿಗೆ ಅಭಿಷೇಕ ಮಾಡಿ, ತಮ್ಮ ಯಾತ್ರೆ ಪೂರ್ತಿಯಾಯಿತೆಂದು ಭಾವಿಸುತ್ತಾರೆ. ಬೆಂಗಳೂರಿನ ವಿವೇಕಾನಂದ ಆಶ್ರಮದ ಐದು ಜನ ಸಂನ್ಯಾಸಿಗಳು, ಐವತ್ತು ಭಕ್ತರೊಡನೆ ರಾಮೇಶ್ವರಂ, ಕನ್ಯಾಕುಮಾರಿ, ಮಧುರೈಗೆ ಒಂದು ತೀರ್ಥಯಾತ್ರೆ ಮಾಡಿದರು.

ಭಗವಂತನನ್ನು ಪೂಜಿಸುವುದಕ್ಕೆ ಶಾಸ್ತ್ರರೀತ್ಯಾ ಮೂರು ಲಕ್ಷಣಗಳಿವೆ: ೧. ಮೂರ್ತಿ. ೨. ಸ್ಥಳ ಹಾಗೂ ೩. ತೀರ್ಥ. ಈ ಮೂರು ಲಕ್ಷಣಗಳಲ್ಲಿ ಯಾವುದಾದರೂ ಒಂದಿರಬೇಕು. ಮೊದಲನೆಯದಾಗಿ ಮೂರ್ತಿ ಅಂದರೆ, ಅಲ್ಲಿಯ ದೇವರನ್ನು ಯಾರಾದರೂ ಪ್ರತಿಷ್ಠಿತರು, ಸಂತರು ಪ್ರತಿಷ್ಠಾಪಿಸಿರಬೇಕು. ಎರಡನೆಯದಾಗಿ ಸ್ಥಳ ಎಂದರೆ, ಮಹಾತ್ಮರು ಅಲ್ಲಿಗೆ ಭೇಟಿ ನೀಡಿರಬೇಕು. ಮೂರನೆಯದಾಗಿ ತೀರ್ಥವೆಂದರೆ, ಅದು ಯಾವುದಾದರೂ ಒಂದು ಪವಿತ್ರನದಿ ಅಥವಾ ಸಮುದ್ರದ ದಡದಲ್ಲಿರಬೇಕು. ಈ ಮೂರೂ ರಾಮೇಶ್ವರದಲ್ಲಿರುವುದು ವಿಶೇಷ.

ನಮ್ಮ ದೇಶದ ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ರಾಮೇಶ್ವರವು ಒಂದು ಎಂದು ಪರಿಗಣಿಸಲಾಗಿದೆ. ಇಲ್ಲಿಯ ಶಿವಲಿಂಗವನ್ನು ಮೂರು ಹೆಸರುಗಳಿಂದ ಕರೆಯುತ್ತಾರೆ— ರಾಮನಾಥ, ರಾಮೇಶ್ವರ, ರಾಮಲಿಂಗ ಎಂದು. ಶ್ರೀರಾಮೇಶ್ವರಕ್ಕೆ ರಾಮಾಯಣದ ಪುರಾತನ ಹಿನ್ನೆಲೆ ಇದೆ. ಶ್ರೀರಾಮನು ಇಲ್ಲಿನ ಈಶ್ವರನನ್ನು ಪ್ರತಿಷ್ಠಾಪಿಸಿರುವುದರಿಂದ, ಈ ಕ್ಷೇತ್ರವನ್ನು ರಾಮೇಶ್ವರವೆಂದು ಕರೆಯುತ್ತಾರೆ. ಈ ರಾಮೇಶ್ವರ ಶಿವನ ದೇವಸ್ಥಾನ ತಮಿಳುನಾಡಿನ ರಾಮನಾಡು ತಾಲ್ಲೂಕಿನ ರಾಮೇಶ್ವರ ಎಂಬ ದ್ವೀಪದಲ್ಲಿ ಸ್ಥಾಪಿಸಲ್ಪಟ್ಟಿದೆ.

ಬಂಗಾಳಕೊಲ್ಲಿ (Bay of Bengal) ಹಾಗೂ ಹಿಂದೂ ಮಹಾಸಾಗರ (Indian Ocean) ಇವೆರಡರ ಸಂಗಮವಾಗುವ ಸ್ಥಳ ಇದು. ಇದನ್ನು ಸೇತು ಎಂದು ಕರೆಯುತ್ತಾರೆ. ಸೇತು ಎಂದರೆ ಮಹಾಸಾಗರ ಎಂದರ್ಥ. ನಮ್ಮ ಭಾರತ ದೇಶದ ಉತ್ತರದಲ್ಲಿ ಹಿಮಾಲಯ ಕೊನೆಯಾದರೆ, ಇನ್ನೊಂದು ಕೊನೆ ರಾಮೇಶ್ವರ. ಅದಕ್ಕೇ ಭಾರತವನ್ನು ವಿವರಿಸುವಾಗ "ಆಸೇತು ಹಿಮಾಚಲ" ಎನ್ನುತ್ತಾರೆ. ಅಂದರೆ, ರಾಮೇಶ್ವರದಿಂದ ಹಿಮಾಲಯದವರೆಗೆ ನಮ್ಮ ಭಾರತ ಹರಡಿದೆ ಎಂದರ್ಥ. ನಮ್ಮ ಆರಾಧ್ಯ ದೇವತೆಯಾದ ಪರಮಶಿವನು ರಾಮೇಶ್ವರದಿಂದ ಹಿಮಾಲಯದವರೆಗೂ ಹರಡಿ, ವ್ಯಾಪಿಸಿಕೊಂಡಿದ್ದಾನೆ ಎಂದರ್ಥ. ಪುರಾಣಗಳಲ್ಲಿ ಇದನ್ನು ಗಂಧಮಾದನ ಪರ್ವತ ಎಂದೂ ಕರೆದಿದ್ದಾರೆ. ರಾಮೇಶ್ವರದ ಸಮೀಪದಲ್ಲಿಯೇ ಇನ್ನೊಂದು ಯಾತ್ರಾಕ್ಷೇತ್ರವಿದೆ. ಇದು ಧನುಷ್ಕೋಟಿ. ಇಲ್ಲಿಂದಲೇ ಶ್ರೀರಾಮನು ಲಂಕೆಗೆ ಸೇತುವೆಯನ್ನು ಕಟ್ಟಿದುದು.





ಇತ್ತೀಚೆಗಿನ ಸಂಶೋಧನೆಗಳಿಂದ ಸೇತುವೆಯು ಇತ್ತೆಂಬುದಕ್ಕೆ ಸಾಕಷ್ಟು ಪುರಾವೆಗಳು ಸಿಕ್ಕಿವೆ. ಭಾರತೀಯ ದೂರಗ್ರಾಹಿ ಉಪಗ್ರಹ ಮತ್ತು ನಾಸಾ (NASA)ದ ಉಪಗ್ರಹದಿಂದ ಪಡೆದ ಛಾಯಾಚಿತ್ರಗಳು ಭಾರತದ ಧನುಷ್ಕೋಟಿಯಿಂದ ಶ್ರೀಲಂಕಾದ ತಲೈಮನ್ನಾರ್‌ವರೆಗೆ ಒಂದು ಭೂಸೇತುವೆ ಇತ್ತೆಂಬುದನ್ನು ಸೂಚಿಸುತ್ತವೆ. ಇದನ್ನು ಹಿಂದೆ ಆಡಂ ಎಂಬುವವನು ಗುರು

ತಿಸಿದ್ದರಿಂದ ಇದನ್ನು ಆಡಮ್ಸ್ ಸೇತುವೆ ಎಂದೂ ಕರೆಯಲಾಗುತ್ತಿದೆ. ಇನ್ನೂ ಈ ವಿಷಯದ ಬಗ್ಗೆ ಸಂಶೋಧನೆಗಳು ನಡೆಯಬೇಕಾಗಿರುವುದರಿಂದ ಹೊಸ ಪುರಾವೆಗಳು ದೊರಕುವ ಸಾಧ್ಯತೆಗಳೂ ಇವೆ.

ಲಂಕೆಯಿಂದ ಹಿಂದಿರುಗಿ ಬರುವಾಗ ಶ್ರೀರಾಮಚಂದ್ರ ರಾಮೇಶ್ವರಕ್ಕೆ ಮತ್ತೆ ಬಂದು ರಾವಣನನ್ನು ಕೊಂದ ಬ್ರಹ್ಮಹತ್ಯಾ ಪಾಪವನ್ನು ತೊಲಗಿಸಲು ಶಿವನನ್ನು ಪೂಜೆ ಮಾಡಿದ. ಶಿವಲಿಂಗದ ಪ್ರತಿಷ್ಠೆಗಾಗಿ ಕೈಲಾಸ ಪರ್ವತದಿಂದ ಶಿವಲಿಂಗವನ್ನು ತರಿಸಲು ಹನುಮಂತನನ್ನು ಶ್ರೀರಾಮನು ಕಳುಹಿಸಿದನು. ಆದರೆ ಹನುಮಂತನು ಸರಿಯಾದ ಸಮಯಕ್ಕೆ ಬರಲಾಗದುದರಿಂದ, ಮುಹೂರ್ತವೇಳೆ ಮುಗಿಯುತ್ತಿದ್ದುದರಿಂದ, ಸೀತಾಮಾತೆ ಮರಳಿನಿಂದಲೇ ಒಂದು ಶಿವಲಿಂಗವನ್ನು ತಯಾರಿಸಿದಳು. ಅವಳ ಪವಿತ್ರವಾದ ಹಸ್ತಸ್ಪರ್ಶದಿಂದ ಮರಳ ಲಿಂಗವು ಗಟ್ಟಿಯಾಗಿ ನೆಲೆಸಿತು. ಶ್ರೀರಾಮ ಅದನ್ನು ಪ್ರತಿಷ್ಠಾಪಿಸಿ ಪೂಜೆಮಾಡಿದ. ಸ್ವಲ್ಪ ಹೊತ್ತಾದ ಮೇಲೆ ಹನುಮಂತ ತನ್ನ ಎರಡೂ ಕೈಗಳಲ್ಲಿ ಎರಡು ಶಿವಲಿಂಗಗಳನ್ನು ತಂದಿರಿಸಿದನು. ಅಷ್ಟರಲ್ಲಿಯೆ ಒಂದು ಲಿಂಗದ ಪ್ರತಿಷ್ಠೆ ಆಗಿರುವುದನ್ನು ಕಂಡು ಅತಿ ದುಃಖಿತನಾದನು. ಆಗ ಶ್ರೀರಾಮನು ಮೊದಲಿನ ಲಿಂಗವನ್ನು ಅಲ್ಲಿಂದ ಹೊರ ತೆಗೆಯಲು ಹೇಳಿದನು. ಹನುಮಂತನು ಅದಕ್ಕೆ ತನ್ನ ಬಾಲವನ್ನು ಸುತ್ತಿ ತನ್ನ ಬಲವನ್ನೆಲ್ಲ ಬಿಟ್ಟು ಅದನ್ನು ಎಳೆದನು. ಆದರೂ ಆ ಲಿಂಗ ಸ್ವಲ್ಪವೂ ಅಲುಗಾಡಲಿಲ್ಲ. ಆಗ ಹನುಮಂತನು ಅದರ ಮಹಿಮೆಯನ್ನರಿತು ಶಾಂತನಾದನು. ಶ್ರೀರಾಮನು ಹನುಮಂತನನ್ನು ಸಮಾಧಾನಗೊಳಿಸಿ, ಸೀತಾದೇವಿ ಸೃಷ್ಟಿಸಿದ ಲಿಂಗದ ಪಕ್ಕದಲ್ಲಿಯೇ ಆಂಜನೇಯನು ತಂದ ಲಿಂಗವನ್ನು ಪ್ರತಿಷ್ಠಾಪಿಸಿ, "ಇನ್ನುಮೇಲೆ ನೀನು ತಂದ ಲಿಂಗಕ್ಕೆ ಮೊದಲ ಪೂಜೆ, ಪುರಸ್ಕಾರ. ನಂತರ ಸೀತೆಯು ಪ್ರತಿಷ್ಠಾಪಿಸಿದ ರಾಮನಾಥ ಲಿಂಗಕ್ಕೆ ಪೂಜೆ," ಎಂದು ಆದೇಶವಿತ್ತನು. ಹನುಮಂತನು ತಂದ ಲಿಂಗವನ್ನು ವಿಶ್ವಲಿಂಗವೆಂದೂ, ಸೀತೆ ಪ್ರತಿಷ್ಠಾಪಿಸಿದ ಲಿಂಗವನ್ನು ರಾಮಲಿಂಗವೆಂದೂ ಕರೆಯುತ್ತಾರೆ. ಅವನು ತಂದ ಇನ್ನೊಂದು ಲಿಂಗವನ್ನು, ಹೊರ ಪ್ರಾಕಾರದ ಇನ್ನೊಂದು ಗುಡಿಯಲ್ಲೆ ಪೂಜಿಸುತ್ತಾರೆ.

ಈ ದೇವಸ್ಥಾನ ತೀರ್ಥಕ್ಷೇತ್ರಕ್ಕೆ ಎಷ್ಟು ಪ್ರಸಿದ್ಧವೋ, ಅಲ್ಲಿಯ ಶಿಲ್ಪಕಲೆಗೂ ಅಷ್ಟೇ ಪ್ರಸಿದ್ಧ. ಇದು ಗಾತ್ರದಲ್ಲೇ ಆಗಲಿ, ವಿಸ್ತೀರ್ಣದಲ್ಲೇ ಆಗಲಿ ಅದ್ವಿತೀಯವಾದದ್ದು. ಇದು ಸಂಪೂರ್ಣ ಕಲ್ಲಿನ ಕಟ್ಟಡ. ಗರ್ಭಗುಡಿಯ ಅಗಲ ಹದಿನೇಳು ಅಡಿ. ದೇವಾಲಯದ ಉದ್ದ ಪೂರ್ವಪಶ್ಚಿಮಕ್ಕೆ ಆರುನೂರ ನಲವತ್ತೈದು ಅಡಿ. ಉತ್ತರ ದಕ್ಷಿಣಕ್ಕೆ ಮುನ್ನೂರು ತೊಂಬತ್ತೈದು ಅಡಿ. ನಡುವಿನ ಪ್ರಾಕಾರದ್ದು ಕ್ರಮವಾಗಿ ಐದು ನೂರು ಅಡಿ ಮತ್ತು ಮುನ್ನೂರು ಅಡಿ. ಇಡೀ ಕಟ್ಟಡದ ಮುಂದೆ ಬೃಹತ್ ಪ್ರಮಾಣದ ಗೋಪುರ. ಅದರ ಮೇಲೆ ಪ್ರತಿ ಅಂಗುಲಕ್ಕೂ ಶಿಲ್ಪ ಕಲಾವಿನ್ಯಾಸ. ಅಲ್ಲಿನ ಅಧಿಷ್ಠಾತೃ ದೇವತೆಯಾದ ಶಿವನ



ಬೃಹತ್ ಪ್ರಮಾಣದ ಗೋಪುರ.

ಲೀಲೆಗಳನ್ನು ಕಲ್ಗಂಬ ಮತ್ತು ಗೋಡೆಗಳ ಮೇಲೆ ಕೆತ್ತಲಾಗಿದೆ. ಅತ್ಯಂತ ಒಳಗಿನ ಪ್ರಾಕಾರವನ್ನು ಪ್ರವೇಶಿಸುತ್ತಿರುವಂತೆಯೇ ಬೃಹದಾಕಾರದ ನಂದಿಯ ಭವ್ಯ ದರ್ಶನವಾಗುತ್ತದೆ. ಅದರ ಮುಂದೆ ಎತ್ತರವಾದ ಗರುಡಗಂಬ.

ಇಂತಹ ಭವ್ಯವಾದ ದೇವಸ್ಥಾನವನ್ನು ನಿರ್ಮಿಸಿದವರು ಯಾರು? ಇದು ಒಬ್ಬರಿಂದ ಒಂದು ಜೀವಿತಕಾಲದಲ್ಲಿ ನಿರ್ಮಿಸಲು ಸಾಧ್ಯವೇ? ಸಿಂಹಳ ದೇಶದ ರಾಜ ಪರಾಕ್ರಮಬಾಹು ವಿಸ್ತೀರ್ಣವಾದ ಗರ್ಭಗುಡಿಯನ್ನು ಕಟ್ಟಿಸಿದನೆಂದು ಚರಿತ್ರೆ ಹೇಳುತ್ತದೆ. ಲೋಕಪ್ರಖ್ಯಾತಿ ಹೊಂದಿರುವ ಮಂಟಪಗಳು, ದೇವಾಲಯದ ಕಟ್ಟಡವೂ, ರಾಮನಾಥಪುರದ ಪರಿಪಾಲಕರು ನಿರ್ಮಿಸಿದ್ದರೆ, ೧೭ನೇ ಶತಮಾನದ ಉದಯ ಸೇತುಪತಿ, ತಿರುಮಲ ಸೇತುಪತಿ, ರಘುನಾಥ ಸೇತುಪತಿ ಮತ್ತು ರಾಮ ಸೇತುಪತಿ ಈ ದೇವಾಲಯದ ನಿರ್ಮಾಣಕ್ಕೆ ಶ್ರಮಿಸಿದ್ದಾರೆ. ಕಾಶಿಯಲ್ಲಿ ವಿಶ್ವೇಶ್ವರನು ಅಲ್ಲಿ ಪ್ರಾಣಬಿಡುವವರ ಕಿವಿಯಲ್ಲಿ ರಾಮತಾರಕ ಮಂತ್ರವನ್ನು ಉಪದೇಶಿಸುತ್ತಾನೆ. ಆದರಿಂದ ಅಲ್ಲಿ ದೇಹತ್ಯಾಗ ಮಾಡುವವರೆಲ್ಲಾ ಮುಕ್ತಿಯನ್ನು ಪಡೆಯುತ್ತಾರೆ. ಅಂತಹ ಶ್ರೀರಾಮನೇ ಇಲ್ಲಿ ಶಿವನ ಪ್ರತಿಷ್ಠೆ ಮತ್ತು ಪೂಜೆ ಮಾಡಿರುವುದರಿಂದ ರಾಮೇಶ್ವರಕ್ಕೆ ಇನ್ನೂ ಹಿರಿದಾದ ಖ್ಯಾತಿ ಇದೆ.

ಇಲ್ಲಿನ ಇನ್ನೊಂದು ಅತ್ಯಂತ ವಿಶೇಷ ಸಂಗತಿಯೆಂದರೆ



ಅಗ್ನಿ ತೀರ್ಥ

ದೇವಸ್ಥಾನದ ಒಳಗಡೆ ಇರುವ ತೀರ್ಥಗಳು. ದೇವಾಲಯದಿಂದ ನೂರು ಮೀಟರ್ ದೂರದಲ್ಲಿ ಸಮುದ್ರವಿದೆ. ಇದಕ್ಕೆ ಅಗ್ನಿತೀರ್ಥ ಎಂದು ಹೆಸರು. ಭಕ್ತರು ಮೊದಲು ಸಮುದ್ರದಲ್ಲಿ ಸ್ನಾನ ಮಾಡಿ, ಒದ್ದೆ ಬಟ್ಟೆಯಲ್ಲಿ ದೇವಸ್ಥಾನಕ್ಕೆ ಬರುತ್ತಾರೆ. ನಂತರ ದೇವಸ್ಥಾನದ ಒಳಗಡೆ ೨೨ ಬಾವಿಗಳಿವೆ. ಒಂದೊಂದು ಬಾವಿಗೂ ಒಂದೊಂದು ತೀರ್ಥ ಎನ್ನುತ್ತಾರೆ. ಚಕ್ರತೀರ್ಥ, ಅಮೃತತೀರ್ಥ, ಶಿವತೀರ್ಥ, ಸರ್ವತೀರ್ಥ ಇತ್ಯಾದಿ. ಪ್ರತಿಯೊಂದು ಬಾವಿಯಿಂದಲೂ ಜೊತೆಯಲ್ಲಿ ಬರುವ ಪಂಡಾಗಳು, ನೀರು ಸೇದಿ ಭಕ್ತರ ತಲೆಯಮೇಲೆ ಸುರಿಯುತ್ತಾರೆ. ಹೀಗೆ ೨೨ ತೀರ್ಥಗಳಲ್ಲೂ ಸ್ನಾನ ಮಾಡಬೇಕು. ಕೊನೆಯ ತೀರ್ಥಕ್ಕೆ ಕೋಟಿತೀರ್ಥ ಎಂದು ಹೆಸರು. ಇಲ್ಲಿ ಕಡೆಯ ಸ್ನಾನ ಮಾಡಿ ಯಾತ್ರಿಕರು ತಮ್ಮ ರಾಮೇಶ್ವರದ ಯಾತ್ರೆಯನ್ನು ಪೂರ್ಣಗೊಳಿಸುತ್ತಾರೆ. ವಿಶೇಷವೆಂದರೆ ಈ ೨೨ ಬಾವಿಗಳ ನೀರೂ ಬೇರೆ ಬೇರೆ ರುಚಿಯನ್ನು ಹೊಂದಿವೆ. ಇಲ್ಲಿ ಸ್ನಾನ ಮಾಡಿದವರಿಗೆ ದೇಹ ಪರಿಶುದ್ಧತೆ ಹಾಗೂ ಮನಸ್ಸಿನ ನಿರ್ಮಲತೆ ಕೂಡಿಬರುತ್ತದೆ. ಈ ತೀರ್ಥಗಳಲ್ಲಿ ಸ್ನಾನ ಮಾಡಿದರೆ ತಲೆ ತಂಪಾಗುವುದನ್ನು ಅನುಭವಿಸಬಹುದು.

ವ್ಯಾಸಮಹರ್ಷಿಗಳು ಮಹಾಭಾರತದಲ್ಲಿ, ಯುಧಿಷ್ಠಿರನಿಗೆ ತೀರ್ಥಯಾತ್ರೆ ಮಾಡುವಂತೆ ಪ್ರೋತ್ಸಾಹಿಸಲು ತೀರ್ಥಕ್ಷೇತ್ರಗಳ ಮಹಿಮೆಯನ್ನು ಹೇಳುವಾಗ ರಾಮೇಶ್ವರದ ಮಹಿಮೆಯನ್ನು ವಿವರಿಸಿ ಈ ಪುಣ್ಯಕ್ಷೇತ್ರಕ್ಕೆ ಭೇಟಿಕೊಡುವಂತೆ ಹೇಳುತ್ತಾರೆ. ಶ್ರೀರಾಮಕೃಷ್ಣರ ತಂದೆಯಾದ, ಅತಿ ದೊಡ್ಡ ಭಕ್ತರಾದ ಶ್ರೀ ಕ್ಷುದಿರಾಮ್ ಚಟರ್ಜಿ, ಕ್ರಿ.ಶ. ೧೮೨೪ರಲ್ಲಿ ತಮ್ಮ ಹಳ್ಳಿಯಾದ ಕಾಮಾರ್‌ಪುಕುರದಿಂದ, ಕಾಲ್ನಡಿಗೆಯಲ್ಲೇ ರಾಮೇಶ್ವರಕ್ಕೆ ಬಂದಿದ್ದರು. ದಕ್ಷಿಣ ಭಾರತದ ತೀರ್ಥಸ್ಥಳಗಳನ್ನೆಲ್ಲಾ ಸಂದರ್ಶಿಸಿ ಒಂದು ವರ್ಷದ ನಂತರ ಮನೆಗೆ ಮರಳಿದರು. ಬರುವಾಗ ರಾಮೇಶ್ವರದಿಂದ ಬಾಣಲಿಂಗವೊಂದನ್ನು ತಂದರು. ಅದನ್ನು ಈಗಲೂ ಕಾಮಾರ್‌ಪುಕುರದ ಶ್ರೀರಾಮಕೃಷ್ಣ ಮಠದಲ್ಲಿ ರಘುವೀರನ ಸಾಲಿಗ್ರಾಮದ ಪಕ್ಕದಲ್ಲಿ ಕಾಣಬಹುದು. ಈ ತೀರ್ಥಯಾತ್ರೆಯ ಸ್ಮೃತಿಯಾಗಿ ಮುಂದೆ ಹುಟ್ಟಿದ ತಮ್ಮ ಎರಡನೆ ಪುತ್ರನಿಗೆ ರಾಮೇಶ್ವರ ಎಂದು ಹೆಸರಿಟ್ಟರು.

ಸ್ವಾಮಿ ವಿವೇಕಾನಂದರು ರಾಮೇಶ್ವರಕ್ಕೆ ಎರಡು ಬಾರಿ ಭೇಟಿಕೊಟ್ಟು, ಶಿವನನ್ನು ಪೂಜಿಸಿದ್ದರು. ಮೊದಲನೆಯ ಭೇಟಿ ಅಮೆರಿಕಕ್ಕೆ ಹೋಗುವ ಮುನ್ನ. ಆಗಲೇ ಅವರಿಗೆ ರಾಮನಾಡಿನ ಅರಸ ಭಾಸ್ಕರ ಸೇತುಪತಿಯ ಪರಿಚಯವಾದದ್ದು. ಅವನು ದಕ್ಷಿಣ ಭಾರತದ ರಾಜರಲ್ಲೆಲ್ಲ ಅತ್ಯಂತ ತಿಳಿವಳಿಕಸ್ಥನೆಂದೂ ಸಮರ್ಥನೆಂದೂ ಹೆಸರುಗಳಿಸಿದ್ದ. ಅವನು ಸ್ವಾಮೀಜಿಯಿಂದ ಆಕರ್ಷಿತನಾಗಿ, ಅವರ ವಿಚಾರಧಾರೆಗೆ ಮಾರುಹೋದ. ಅವರು ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸುವ ತಮ್ಮ ವಿಚಾರವನ್ನು ಮುಂದಿಟ್ಟಾಗ ಮಹಾರಾಜ ಅವರನ್ನು ಹೃತ್ಪೂರ್ವಕವಾಗಿ ಬೆಂಬಲಿಸಿದ. ಸ್ವಾಮೀಜಿ ಸಮುದ್ರದಲ್ಲಿ ಸ್ನಾನಮಾಡಿ ಶ್ರೀ ರಾಮೇಶ್ವರ ಲಿಂಗವನ್ನು ಪೂಜಿಸಿದರು.



ರಾಮೇಶ್ವರದ ಸಾವಿರ ಕಂಬಗಳ ಮಂಟಪ

ಎರಡನೆಯ ಭೇಟಿ ಅಮೆರಿಕದಿಂದ ವಿಜಯಿಯಾಗಿ ಹಿಂತಿರುಗಿದಾಗ. ರಾಜಾಭಾಸ್ಕರ ಸೇತುಪತಿಯೇ ಅವರನ್ನು ಬರಗೊಳ್ಳಲು ಎಲ್ಲ ಏರ್ಪಾಡು ಮಾಡಿದ್ದ. ಅದು ೧೮೯೭ರ ಜನವರಿ ೨೬ರಂದು. ದೇವಸ್ಥಾನದಿಂದ ಸ್ವಾಮೀಜಿಯವರ ಸ್ವಾಗತಕ್ಕಾಗಿ ವಿಜೃಂಭಣೆಯ ವ್ಯವಸ್ಥೆಯಾಗಿತ್ತು. ಅವರನ್ನು ಹೊತ್ತ ವಾಹನ ದೇವಸ್ಥಾನವನ್ನು ಸಮೀಪಿಸುತ್ತಲೇ ಆನೆ, ಒಂಟೆ, ಕುದುರೆಗಳಿಂದ ಕೂಡಿದ ಭಾರೀ ಮೆರವಣಿಗೆ ಹೊರಟಿತು. ದೇವಸ್ಥಾನದ ಲಾಂಛನವಾದ ಛತ್ರಿ, ಚಾಮರಗಳೂ, ಕಹಳೆ, ವಾದ್ಯಗಳೂ ಇದ್ದವು. ಮಹಾತ್ಮನೊಬ್ಬನಿಗೆ ಮಾತ್ರ ದೊರೆಯಬಲ್ಲ ಸ್ವಾಗತ. ಬಳಿಕ ಸ್ವಾಮೀಜಿ ದೇವಾಲಯವನ್ನು ಪ್ರವೇಶಿಸಿ ರಾಮೇಶ್ವರನ ದರ್ಶನ ಮಾಡಿದರು. ಅವರಿಗೆ ದೇವಸ್ಥಾನದ ರತ್ನಾಭರಣಗಳನ್ನು ತೋರಿಸಲಾಯಿತು. ಅನಂತರ ಅವರನ್ನು ಬೃಹತ್ತಾದ ಆ ದೇವಸ್ಥಾನದ ಸುತ್ತಲೂ ಕರೆದೊಯ್ದು ಅದರ ವಿವಿಧ ಭಾಗಗಳನ್ನೂ ವಾಸ್ತುಶಿಲ್ಪವನ್ನೂ ತೋರಿಸಲಾಯಿತು. ಅದರಲ್ಲೂ, ಸುಂದರವಾದ ಕೆತ್ತನೆಗಳುಳ್ಳ ಸಾವಿರ ಕಂಬಗಳು ಆ ದೇವಸ್ಥಾನದ ಒಂದು ವಿಶೇಷ ಆಕರ್ಷಣೆ. ಬಳಿಕ ಅಲ್ಲಿ ನೆರೆದಿದ್ದ ಜನರನ್ನುದ್ದೇಶಿಸಿ ಭಾಷಣ ಮಾಡುವಂತೆ ಅವರನ್ನು ಕೇಳಿಕೊಳ್ಳಲಾಯಿತು. ಇಲ್ಲಿಯೇ ಸ್ವಾಮೀಜಿ ತಮ್ಮ ಉಪದೇಶದ ಸೂತ್ರವಾಗಿದ್ದ ಜೀವರಲ್ಲಿ ಶಿವನನ್ನು ಕಂಡು

ಪೂಜಿಸಬೇಕು ಎಂಬ ತತ್ವವನ್ನು ಸಾರಿದರು. ಅಲ್ಲಿ ಸ್ವಾಮೀಜಿ ಸ್ಫೂರ್ತಿಭರಿತರಾಗಿ ಹೇಳಿದರು : "ಶಿವನನ್ನು ಕೇವಲ ಮೂರ್ತಿಗಳಲ್ಲಿ ಮಾತ್ರ ಪೂಜಿಸಿದರೆ ಸಾಲದು; ಜೀವರಲ್ಲಿರುವ ಶಿವನನ್ನು, ಬಡವರಲ್ಲಿರುವ ಶಿವನನ್ನು, ದೀನರಲ್ಲಿ, ದಲಿತರಲ್ಲಿ ಇರುವ ಶಿವನನ್ನು ಪೂಜಿಸಬೇಕು."

ಶ್ರೀಮಾತೆ ಶಾರದಾದೇವಿಯವರು ತಮ್ಮ ಪರಿವಾರದೊಡನೆ ರಾಮೇಶ್ವರಕ್ಕೆ ಭೇಟಿಕೊಟ್ಟದ್ದು ಇನ್ನೂ ವಿಶೇಷ. ಶ್ರೀಮಾತೆಯವರು ರಾಮೇಶ್ವರಕ್ಕೆ ಬರುವ ವಿಷಯವನ್ನು ರಾಜಾ ಸೇತುಪತಿ ದೇವಾಲಯದ ಅರ್ಚಕರಿಗೆ ತಂತಿಯ ಮೂಲಕ ತಿಳಿಸಿದ್ದ, "ನನ್ನ ಗುರುವಿನ ಗುರು ಪರಮಗುರು ದೇವಸ್ಥಾನಕ್ಕೆ ಬರುತ್ತಿದ್ದಾರೆ, ಅವರಿಗೆ ಎಲ್ಲ ಸೌಕರ್ಯಗಳನ್ನೂ ಒದಗಿಸಿಕೊಡುವುದು" ಎಂದು. ಇದರಿಂದಾಗಿ ಶ್ರೀಮಾತೆಯವರು ನೇರ ಗರ್ಭಗುಡಿಯೊಳಗೆ ಪ್ರವೇಶಿಸಿ ಪೂಜೆ ಮಾಡುವ ಅವಕಾಶ ದೊರೆಯಿತು. ದೇವಸ್ಥಾನದ ಚರಿತ್ರೆಯಲ್ಲಿ ಇಬ್ಬರೇ ಮಹಿಳೆಯರಿಗೆ ಈ ಭಾಗ್ಯ ದೊರೆತದ್ದು. ಶ್ರೀಸೀತಾದೇವಿ ಲಿಂಗಪ್ರತಿಷ್ಠೆ ಮಾಡಿದಾಗ ಮತ್ತು ಇಂದು ಶ್ರೀಶಾರದಾದೇವಿಯವರಿಗೆ. ಶ್ರೀಮಾತೆಯವರು ಗಂಗಾ ಜಲ ಹಾಗೂ ಪುಷ್ಪಗಳಿಂದ ತಮ್ಮ ಮನದಣಿಯೆ ಪೂಜೆ ಮಾಡಿದರು. ಸ್ವಾಮಿ ರಾಮಕೃಷ್ಣಾನಂದರು ಪೂಜೆಗಾಗಿ ನೂರೆಂಟು ಚಿನ್ನದ ಬಿಲ್ವದಳಗಳನ್ನು ಮಾಡಿಸಿಕೊಟ್ಟಿದ್ದರು. ಅವನ್ನು ಶ್ರೀಮಾತೆಯವರು ಶಿವನಿಗೆ ಸಮರ್ಪಿಸಿದರು. ಈಗಲೂ ಆ ಚಿನ್ನದ ಬಿಲ್ವದಳಗಳು ಶಿವನ ಆಭರಣಗಳ ಜೊತೆ ಜೋಪಾನವಾಗಿ ಇಡಲ್ಪಟ್ಟಿವೆ. ಅವರು ಅಲ್ಲಿ ಮೂರು ದಿನ ಇದ್ದರು. ಆ ಮೂರು ದಿನವೂ ಬೆಳಿಗ್ಗೆ-ಸಂಜೆ ದೇವಾಲಯವನ್ನು ಸಂದರ್ಶಿಸಿದರು. ಮೂರನೆಯ ದಿನ ಶ್ರೀಮಾತೆಯವರು ವಿಶೇಷ ಪೂಜೆಯ ವ್ಯವಸ್ಥೆ ಮಾಡಿಸಿದರು. ಅಂದು ಪಂಡರಿಂದ ರಾಮೇ ಶ್ವರದ ಮಾಹಾತ್ಮ್ಯವನ್ನು ಓದಿಸಿ, ಕೇಳಿ ಅವರಿಗೆಲ್ಲ ಮೃಷ್ಟಾನ್ನ ಭೋಜನ ಮಾಡಿಸಿ, ಒಂದೊಂದು ಜಲಪಾತ್ರೆಯನ್ನು ಕೊಡಿಸಿದರು. ರಾಮೇಶ್ವರದ ಮಾಹಾತ್ಮ್ಯವನ್ನು ಕೇಳಬೇಕಾದರೆ ಕೈಯಲ್ಲಿ ಎಲೆ, ಅಡಿಕೆ, ದಕ್ಷಿಣೆ ಹಿಡಿದುಕೊಂಡು ಕುಳಿತು ಕೇಳಬೇಕು. ಬಳಿಕ ಅದನ್ನು ಓದಿದವರಿಗೆ ಅರ್ಪಿಸಬೇಕು. ಇದು ಸಂಪ್ರದಾಯ. ಇದನ್ನು ಶ್ರೀಮಾತೆಯವರು ಅಕ್ಷರಶಃ ಪಾಲಿಸಿದರು. ರಾಮನಾಡಿನ ರಾಜ ದೇವಸ್ಥಾನದ ಅರ್ಚಕರಿಗೆ ಹೇಳಿ ಕಳಿಸಿದ್ದ—ಶ್ರೀಮಾತೆಯವರಿಗೆ ದೇವರ ಆಭರಣಗಳನ್ನು ತೋರಿಸಿ ಅವುಗಳಲ್ಲಿ ಅವರು ಬಯಸಿದ್ದನ್ನು ಕೊಡಬೇಕು—ಎಂದು. ಆದರೆ ಶ್ರೀಮಾತೆಯವರು, "ಸ್ವಾಮಿ ರಾಮಕೃಷ್ಣಾನಂದರು ನನಗೆ ಎಲ್ಲವನ್ನೂ ಒದಗಿಸಿದ್ದಾರೆ. ನನಗೇನೂ ಬೇಡ" ಎಂದುಬಿಟ್ಟರು.

ಶ್ರೀಮಾತೆಯವರು ಮೊದಲ ದಿನ ರಾಮೇಶ್ವರಲಿಂಗದ ದರ್ಶನ ಮಾಡಿದ ಸಂದರ್ಭದಲ್ಲಿ ಒಂದು ಅದ್ಭುತ ಸ್ವಾರಸ್ಯ ನಡೆಯಿತು. ಶ್ರೀಮಾತೆಯವರು ಅನಾಚ್ಛಾದಿತ ಲಿಂಗವನ್ನು ನೋಡಿದ ತಕ್ಷಣ ತಮಗೇ ಅರಿಯದಂತೆ ಉದ್ಗರಿಸಿದರು, "ನಾನು ಹಿಂದೆ ಹೇಗೆ ಬಿಟ್ಟುಹೋಗಿದ್ದೆನೋ ಈಗಲೂ ಹಾಗೆಯೇ ಇದೆ" ಎಂದು. ಇದನ್ನು ಕೇಳಿದ ಜೊತೆಯಲ್ಲಿದ್ದವರು ಅವಾಕ್ಕಾಗಿ ಆದರ ಅರ್ಥ ಏನು ಎಂದು ವಿಚಾರಿಸಿದರು. ಶ್ರೀಮಾತೆಯವರು ತಕ್ಷಣ ಮಾತು ತೇಲಿಸಿಬಿಟ್ಟರು. "ಏನಿಲ್ಲ, ಏನೋ ಅರ್ಥವಿಲ್ಲದ ಎರಡು ಮಾತು ಹೊರಬಂತು ಅಷ್ಟೆ" ಎಂದರು. ಮುಂದೆ ಅವರು ಕಲ್ಕತ್ತೆಗೆ ಹಿಂದಿರುಗಿದ ಮೇಲೆ, ಗೋಲಾಪ್‌ಮಾ ಒತ್ತಾಯ ಮಾಡಿ ಕೇಳಿದರು. ಮೊದಲು ಮಾತನ್ನು ತೇಲಿಸಿಬಿಡಲು ಯತ್ನಿಸಿದರೂ ಕೊನೆಗೆ, ಯಾವ ವ್ಯಕ್ತಿ ಹಿಂದೆ ತ್ರೇತಾಯುಗದಲ್ಲಿ ಶ್ರೀರಾಮಚಂದ್ರನ ಸಹಧರ್ಮಿಣಿಯಾಗಿ ಅವತರಿಸಿ ರಾಮೇಶ್ವರತೀರದಲ್ಲಿ ಯಾವ ಶಿವಲಿಂಗವನ್ನು ನಿರ್ಮಿಸಿ ಪೂಜೆ ಮಾಡಿದ್ದಳೋ, ಆ ಶಿವಲಿಂಗ ಈಗಲೂ ಹಾಗೆಯೇ ಇರುವುದನ್ನು ಕಂಡು ಆ ಮಾತು ಹೊರಬಿದ್ದಿತೆಂದು ಒಪ್ಪಿಕೊಂಡರು.

❄

### ಕಪಿಮುಷ್ಟಿ

ಮಂಗನನ್ನು ಹಿಡಿಯುವ ಒಂದು ವಿಶೇಷ ವಿಧಾನವಿದೆ. ಸಣ್ಣ ಮೂತಿ ಇರುವ ಅನೇಕ ಮಡಕೆಗಳನ್ನು ನೆಲದಲ್ಲಿ ಹೂಳುತ್ತಾರೆ. ಅವುಗಳಲ್ಲಿ ನೆಲಗಡಲೆ ಹಾಕಿರುತ್ತಾರೆ. ಮಂಗಗಳು ಬರುತ್ತವೆ. ಮಡಕೆಯೊಳಗೆ ತಮ್ಮ ಕೈಹಾಕಿ ನೆಲಗಡಲೆಯನ್ನು ಬಾಚಿಕೊಳ್ಳುತ್ತವೆ. ಈಗ ನೆಲಗಡಲೆಯಿಂದ ತುಂಬಿದ ಕೈಮುಷ್ಟಿಯನ್ನು ಹೊರಗೆ ತೆಗೆಯಲಾಗುವುದಿಲ್ಲ—ಏಕೆಂದರೆ ಮಡಕೆಯ ಮೂತಿ ಚಿಕ್ಕದಾಗಿರುತ್ತದೆ. ಅವು ನೆಲಗಡಲೆಯನ್ನು ಬಿಟ್ಟರೆ ಕೈಯನ್ನು ಹೊರಗೆ ತೆಗೆಯಬಹುದು. ಆದರೆ ಅವು ಅದನ್ನು ಬಿಡಲಾರವು. ಹೀಗೆ ಅವು ಅಲ್ಲಿ ಸಿಕ್ಕಿಹಾಕಿಕೊಂಡುಬಿಡುತ್ತವೆ. ಜನರು ಬಂದು ಅವುಗಳನ್ನು ಬಂಧಿಸಿಕೊಂಡು ಹೋಗಿ ತಮ್ಮ ಸ್ವಾರ್ಥೋದ್ದೇಶಕ್ಕೆ ಬಳಸಿಕೊಳ್ಳುತ್ತಾರೆ.

ಇದೇ ನಮ್ಮ ಅವಸ್ಥೆಯೂ ಕೂಡ. ನಾವು ವಿಷಯವಸ್ತುಗಳನ್ನು ಕಪಿಮುಷ್ಟಿಯಂತೆ ಬಾಚಿ ಹಿಡಿದುಕೊಳ್ಳುತ್ತೇವೆ. ಏನೇ ಆದರೂ ಅವನ್ನು ಬಿಡಲು ಮನಸ್ಸಾಗುವುದಿಲ್ಲ. ಹೀಗೆ ಸ್ವಾರ್ಥತೆ ಸಂಕುಚಿತ ಪರಿಧಿಯಲ್ಲಿ ನಾವು ಸಿಕ್ಕಿಹಾಕಿಕೊಳ್ಳುತ್ತೇವೆ. ಆಸೆಗಳನ್ನು ಬಿಡಲಾರೆವು ಮತ್ತು ಬಂಧನದಿಂದ ಪಾರಾಗಲಾರೆವು.

"ನಾವು ಮಧುವನ್ನು ಕುಡಿಯಲು ಬಂದೆವು. ಆದರೆ ನಮ್ಮ ಕೈಕಾಲುಗಳು ಅದರಲ್ಲಿ ಸಿಕ್ಕಿಕೊಂಡಿರುವುದು. ನಾವು ಆನಂದವನ್ನು ಅನುಭವಿಸುವುದಕ್ಕೆ ಬಂದೆವು. ಆದರೆ ಮತ್ತಾರೊ ನಮ್ಮಿಂದ ಆನಂದವನ್ನು ಅನುಭವಿಸುತ್ತಿರುವರು. ನಾವು ಆಳುವುದಕ್ಕೆ ಬಂದೆವು, ಆದರೆ ಮತ್ತಾರೊ ನಮ್ಮನ್ನು ಆಳುತ್ತಿರುವರು."

— ಸ್ವಾಮಿ ವಿವೇಕಾನಂದ

### ಆಶ್ರಮದ ಕಾರ್ಯಕ್ರಮಗಳು
### ಜುಲೈ 2003

| | | |
|---|---|---|
| ಏಕಾದಶಿ | ಗುರುವಾರ | 10 |
| ಶ್ರೀಗುರುಪೂರ್ಣಿಮಾ | ಭಾನುವಾರ | 13 |
| ಏಕಾದಶಿ | ಶುಕ್ರವಾರ | 25 |
| ಸ್ವಾಮಿ ರಾಮಕೃಷ್ಣಾನಂದ ಜಯಂತಿ | ಭಾನುವಾರ | 27 |